ಉಕ್ಕಿಸಿ, ಮೌಲ್ಯಮಾಪನ ಕೇಂದ್ರದಲ್ಲಿನ ಬಿಗುವನ್ನು ಕಡಿಮೆ ಮಾಡುತ್ತವೆ. ಕೆಲವು ಉತ್ತರಗಳು ನಗು ಉಕ್ಕಿಸಿದರೆ ಇನ್ನೂ ಕೆಲವು ವಿಷಾದವನ್ನುಂಟು ಮಾಡುತ್ತವೆ.

### ಪ್ರಶ್ನೆ ಬರೆದರೂ ಮಾರ್ಕ್ಸ್!

ಅದು 2009 ದ್ವಿತೀಯ ಪಿಯುಸಿ ಫಲಿತಾಂಶದ ದಿನ. ದಿನೇಶ್ ಗಣಿತದಲ್ಲಿ ಫೇಲಾಗಿದ್ದ. ಕೇವಲ ಏಳು ಅಂಕ ಪಡೆದಿದ್ದ. ಬೇಜಾರಿನ ಬದಲು ಆಶ್ಚರ್ಯದ ಮುಖ ಹೊತ್ತು ನಿಂತಿದ್ದ. ಏನಾಯಿತು ಎಂದು ಕರೆದು ವಿಚಾರಿಸಿದೆ. 'ಸರ್, ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳನ್ನು ಬರೆದರೆ ಅಂಕ ನೀಡುತ್ತಾರೆಯೇ' ಎಂದು ಕೇಳಿದ. 'ಅದು ಹೇಗೆ ಸಾಧ್ಯ, ಎಂದಿಗೂ ಇಲ್ಲ' ಎಂದೆ. 'ಈ ಬಾರಿಯ ಗಣಿತ ಪರೀಕ್ಷೆಯ ದಿನ ನನಗೆ ಹುಷಾರಿರಲಿಲ್ಲ. ಮನೆಯಲ್ಲಿ ಪರೀಕ್ಷೆಗೆ ಹೋಗುವುದು ಬೇಡ ಎಂದಿದ್ದರು. ಆದರೂ ಪ್ರಶ್ನೆಪತ್ರಿಕೆ ಹೇಗಿರುತ್ತದೆ ಎಂಬುದಾದರೂ ಗೊತ್ತಾಗುತ್ತದೆ ಎಂದು ಹೋಗಿದ್ದೆ. ಪ್ರಶ್ನೆ ಪತ್ರಿಕೆ ಕಷ್ಟವಿತ್ತು, ಖಾಲಿ ಪೇಪರ್ ಕೊಡುವ ಬದಲು ಕೇವಲ ಪ್ರಶ್ನೆಗಳನ್ನೇ ಬರೆದಿದ್ದೆ. ಆದರೂ 7 ಅಂಕಗಳು ಬಂದಿವೆ. ಪ್ರಶ್ನೆ ಬರೆದರೆ ಮಾರ್ಕ್ ಕೊಡ್ತಾರೆ ಅನ್ನೋದು ಈಗ ಗೊತ್ತಾಯ್ತು' ಎಂದು ನಮ್ಮ ಮೌಲ್ಯಮಾಪಕರ ಕೆಲಸವನ್ನು ಆಡಿಕೊಂಡ. ಸತ್ಯ ನನಗೆ ಗೊತ್ತಿತ್ತು. ಆ ವರ್ಷ 7 ಅಂಕಗಳಿಗೆ ಸಮವಾದ ಒಟ್ಟು ಮೂರು ಪ್ರಶ್ನೆಗಳು ತಪ್ಪಾಗಿ ಮುದ್ರಿತಗೊಂಡಿದ್ದರಿಂದ ಏಳು ಕೃಪಾಂಕ (ಗ್ರೇಸ್ ಮಾರ್ಕ್ಸ್)ಗಳನ್ನು ನೀಡಬೇಕೆಂದು ವ್ಯಾಲುಯೇಶನ್ ಕ್ಯಾಂಪ್‌ನಲ್ಲಿ ನಿರ್ಧರಿಸಲಾಗಿದ್ದರಿಂದ, ಆ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸಿದವರಿಗೆಲ್ಲಾ ಅಂಕ ಕೊಡಬೇಕಾಗಿತ್ತು. ಆದ್ದರಿಂದ ನನ್ನ ವಿದ್ಯಾರ್ಥಿ ಪ್ರಶ್ನೆಗಳನ್ನು ಯಥಾವತ್ತಾಗಿ ಬರೆದಿದ್ದರಿಂದ ಅವನಿಗೂ 7 ಅಂಕಗಳು ದೊರಕಿದ್ದವು.

ಇನ್‌ವಿಜಿಲೇಟರ್ ಎಂಬ ಶನಿ

ಇನ್ನೊಂದು ಪ್ರಸಂಗದಲ್ಲಿ ಒಬ್ಬ ವಿದ್ಯಾರ್ಥಿ, 'ಸರ್/ಮ್ಯಾಡಂ, ಉತ್ತರಗಳನ್ನು ಬೇಕಾಬಿಟ್ಟಿ ಬರೆದಿದ್ದೇನೆ. ದಯಮಾಡಿ ಬೇಜಾರು ಮಾಡಿಕೊಳ್ಳಬೇಡಿ. ಆ ಇನ್‌ವಿಜಿಲೇಟರ್ ಎಂಬ ಶನಿ ನನ್ನ ಬಳಿಯೇ ಸುತ್ತಾಡುತ್ತಿದ್ದ. ನಾನು ಬರೆಯುವುದನ್ನೇ ನೋಡುತ್ತಿದ್ದ. ಅದಕ್ಕೇ ಹೀಗೆ ಬರೆದಿದ್ದೇನೆ' ಎಂದು ಉತ್ತರಿಸಿದ್ದ. ಇನ್ನೊಬ್ಬ ವಿದ್ಯಾರ್ಥಿ, 'ನಾನು ನನ್ನ ತಾಯಿಗೆ ಒಬ್ಬನೇ ಮಗ. ಅವಳು ಹೃದ್ರೋಗಿ. ಇದು ನನ್ನ ಮೂರನೆಯ ಪ್ರಯತ್ನ. ಇದರಲ್ಲಿ ಪಾಸಾಗುತ್ತೇನೆ ಎಂದು ನಮ್ಮಮ್ಮನಿಗೆ ಮಾತು ನೀಡಿ ಇಲ್ಲಿಗೆ ಬಂದಿದ್ದೇನೆ. ನಾನು ಪಾಸಾಗದಿದ್ದರೆ ಅವಳು ಉಳಿಯುವುದಿಲ್ಲ, ದಯಮಾಡಿ ನನ್ನನ್ನು ಪಾಸ್ ಮಾಡಿ' ಎಂದು ವಿನಂತಿಸಿಕೊಂಡಿದ್ದ.

ಪ್ರೂಫ್ ನೋಡಬೇಡಿ – ಉತ್ತರ ಮಾತ್ರ ನೋಡಿ

2012ರ ವಾರ್ಷಿಕ ಪರೀಕ್ಷೆಯ ಗಣಿತದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಬೆಂಗಳೂರಿನ ಪ್ರತಿಷ್ಠಿತ ಕಾಲೇಜೊಂದರಲ್ಲಿ ನಡೆಯುತ್ತಿತ್ತು. ಪ್ಯಾಕೆಟ್‌ನಲ್ಲಿದ್ದ ಒಂದು ಉತ್ತರ ಪತ್ರಿಕೆ ಮಾತ್ರ ನಮ್ಮ ತಂಡವನ್ನೆಲ್ಲಾ ದಿಗ್ಮೂಢರನ್ನಾಗಿಸಿತ್ತು. ಪತ್ರಿಕೆಯ ಬಹುತೇಕ ಪ್ರಶ್ನೆಗಳ ಉತ್ತರ ಸರಿಯಾಗಿದ್ದವು. ಆದರೆ ಯಾವ ಉತ್ತರವೂ ಒಂದು ಸಾಲು ಅಥವಾ ಪದಕ್ಕಿನ್ನ ದೊಡ್ಡದಾಗಿರಲಿಲ್ಲ. ಐದು ಅಂಕದ ಪ್ರಶ್ನೆಗೂ ಒಂದೇ ವಾಕ್ಯದ ಉತ್ತರ ಬರೆಯಲಾಗಿತ್ತು ಅದು ಸರಿಯಾದುದೂ ಆಗಿತ್ತು. ಅಕ್ಕಪಕ್ಕದವರನ್ನು ನೋಡಿ ಕೇವಲ ಉತ್ತರವನ್ನು ಮಾತ್ರ ನಕಲು ಮಾಡಿರಬಹುದೆನ್ನಿಸಿ ಇದಕ್ಕೆ ಯಾವ ಅಂಕ ಕೊಡುವುದು ಎಂದು ಸ್ಪೆಷಲ್ ರಿವ್ಯೂವರ್ ಬಳಿ ಹೋದೆ. ಅವರೂ 'ಹೌದಲ್ಲರೀ, ಉತ್ತರಗಳೆಲ್ಲಾ ಸರಿಯಾಗಿವೆ, ಒಂದಕ್ಕೂ ಸ್ಟೆಪ್ಸ್ ಇಲ್ಲ, ಪ್ರೂಫ್ ಇಲ್ಲ' ಎಂದು ಪುಟ ತಿರುವಿದರು. ಏನೂ ಗೊತ್ತಾಗಲಿಲ್ಲ. ಮುಖಪುಟವನ್ನೂ ನೋಡಿ ಒಳಪುಟವನ್ನು ನೋಡುವಾಗ ಪರೀಕ್ಷಾ ಮಾರ್ಗ ಸೂಚಿಯ ಕೆಳಭಾಗದಲ್ಲಿ ನೀಟಾಗಿ ಬರೆದ ಕೆಲವು ಸಾಲುಗಳಿದ್ದವು. ಅದನ್ನು ಓದಿದ ನಂತರ ವಿದ್ಯಾರ್ಥಿಯು ಏಕೆ ಒಂದೊಂದೇ ಪದ, ಸಾಲು ಬಳಸಿ ಉತ್ತರಿಸಿರಬಹುದು ಎಂದು ಖಾತ್ರಿಯಾಯಿತು. ಆದರೆ ಎಲ್ಲ ಸರಿ ಉತ್ತರ ಗೊತ್ತಿದ್ದ ವಿದ್ಯಾರ್ಥಿ ಹೀಗೇಕೆ ಮಾಡಿದ/ಳು ಎಂಬುದು ಈಗಲೂ ನಿಗೂಢವಾಗುಳಿದಿದೆ. ವಿದ್ಯಾರ್ಥಿಯು 'ನಾನು ಶ್ರೀನಿವಾಸ ರಾಮಾನುಜನ್‌ನ ಅಭಿಮಾನಿ. ಅವರಂತೆಯೇ ನನ್ನ ಲೆಕ್ಕಗಳೂ ಇವೆ. ಅವರು ನಿರೂಪಿಸಿದ್ದ ಸೂತ್ರ–ಲೆಕ್ಕಗಳಿಗೆ ಯಾವುದೇ ಪ್ರೂಫ್ ಇರುತ್ತಿರಲಿಲ್ಲ. ನೇರವಾಗಿ ಉತ್ತರವೇ ಇರುತ್ತಿತ್ತು. ಅವರ ಅಭಿಮಾನಿಯಾದ ನಾನು ಹಾಗೆಯೇ ಉತ್ತರ ಬರೆದಿದ್ದೇನೆ. ಅವರ ಕೆಲಸವನ್ನು ಜಗತ್ತೇ ಮೆಚ್ಚಿಕೊಂಡಿದೆ. ನೀವೂ ಸಹ ನನ್ನ ಉತ್ತರಗಳಿಗೆ ಪೂರ್ಣ ಅಂಕ ನೀಡಿ ರಾಮಾನುಜನ್ ಮಾದರಿಗೆ ಮರ್ಯಾದೆ ಕೊಡಿ. ಇಲ್ಲದಿದ್ದರೆ ಅವರನ್ನೇ ಅವಮಾನಿಸಿದಂತಾಗುತ್ತದೆ' ಎಂದು ಬರೆದಿದ್ದ. ಗಣಿತದ ಹಲವು ಪ್ರಶ್ನೆಗಳಿಗೆ ಕ್ರಮಾನುಗತ (ಸ್ಟೆಪ್ಸ್) ಉತ್ತರ ಬೇಕೇ ಬೇಕಾಗಿತ್ತು. ಅದು ಇಲ್ಲದಿದ್ದ ಕಾರಣ ವಿದ್ಯಾರ್ಥಿಗೆ ಸರಿಯಾದ ಅಂಕಗಳು ಬರದೆ ಆತ ಅನುತ್ತೀರ್ಣನಾಗಿದ್ದ.

ನ್ಯೂಟನ್ನನ ನಿಯಮ ಸರಿ ಇದೆ ಎಂದು ನಿರೂಪಿಸಿ

'ಕ್ರಿಯೆಗೆ ವಿರುದ್ಧವಾದ ಪ್ರತಿಕ್ರಿಯೆ ಇದ್ದೇ ಇರುತ್ತದೆ ಎಂದು ನ್ಯೂಟನ್ ನಿರೂಪಿಸಿದ್ದನ್ನು ನಾವು ನೀವೆಲ್ಲ ಓದಿದ್ದೇವೆ ಅದರ ಮೇಲೆಯೇ ಜಗತ್ತು ನಿಂತಿದೆ. ಯಾರು ಪಾಲಿಸಲಿ ಬಿಡಲಿ, ನನಗೆ ಇದರ ಮೇಲೆ ಸಂಪೂರ್ಣ ನಂಬಿಕೆ ಇದೆ, ಆದ್ದರಿಂದ ನಾನು ಈ ಪೇಪರ್‌ನಲ್ಲಿ ಎಲ್ಲ ಪ್ರಶ್ನೆಗಳನ್ನೂ ಒಂದೂ ಬಿಡದಂತೆ ಬರೆದಿದ್ದೇನೆ. ಅದಕ್ಕೆ ತಕ್ಕ ಉತ್ತರಗಳನ್ನು ನೀವೇ ಬರೆದು, ಅಂಕ ನೀಡಿ ನ್ಯೂಟನ್ನನ ನಿಯಮ ಸರಿ ಎಂದು ನಿರೂಪಿಸಿ' ಎಂದು ಒಬ್ಬ ಆಜ್ಞೆ ಮಾಡಿದ್ದ. ಆತನಿಗೆ ಸಿಕ್ಕ ಅಂಕ ಒಂದು ದೊಡ್ಡ ಸೊನ್ನೆ.

### ನಮ್ಮದು ಜನುಮದ ಜೋಡಿ

ಆಗ 'ಮುಂಗಾರು ಮಳೆ' ಸಿನಿಮಾ ಹಿಟ್ ಆಗಿದ್ದ ಕಾಲ. ಒಬ್ಬ ವಿದ್ಯಾರ್ಥಿ 'ನಾನು ಈ ಪರೀಕ್ಷೆ ಬರೆಯುತ್ತಿರುವುದು ನಾನು ಪ್ರೀತಿಸುತ್ತಿರುವ ನನ್ನ ಪ್ರಿಯತಮೆಗಾಗಿ. ಅವಳಿಗಾಗಿ ನಾನು ಕಾಲೇಜಿಗೆ ಹೋಗುತ್ತಿದ್ದೆ. ಅವಳೇನೋ ಜಾಣೆ, ಪಾಸಾಗಿ ಮುಂದೆ ಹೋಗುತ್ತಾಳೆ, ನಾನು ಫೇಲಾಗಿ ಬಿಟ್ಟರೆ ನನ್ನ ಗತಿ ಮುಗಿದಂತೆಯೆ. ಅವಳ ಬಳಿಯೇ ಇರಲು ನನಗೆ ಈ ಪರೀಕ್ಷೆ ಪಾಸಾಗಲೇಬೇಕಾದ ಅನಿವಾರ್ಯತೆ ಇದೆ. ದಯಮಾಡಿ ಪ್ರೇಮಿಗಳನ್ನು ದೂರಮಾಡಬೇಡಿ. ಅವಳಿಗೂ ನನ್ನ ಮೇಲೆ ಪ್ರೀತಿ ಇದೆ. ಬೇಕಿದ್ದರೆ ಅವಳ ಉತ್ತರ ಪತ್ರಿಕೆಯನ್ನೂ ಚೆಕ್ ಮಾಡಿ. ಅವಳೂ ನನ್ನ ಕುರಿತು ಎಲ್ಲಿಯಾದರೂ ಬರೆದಿರುತ್ತಾಳೆ' ಎಂದು ಅವಳ ನೋಂದಣಿ ಸಂಖ್ಯೆಯನ್ನೂ ನಮೂದಿಸಿದ್ದ.

### ಲಾಸ್ಟ್ ಪಂಚ್

ನಾವೆಲ್ಲ ತರಗತಿಯಲ್ಲಿ ಪಾಠಮಾಡಿ ಪರೀಕ್ಷೆ ತಯಾರಿಗೆ ಟಿಪ್ಸ್ ಕೊಡುವಾಗ, 'ಯಾವ ಪ್ರಶ್ನೆಯನ್ನೂ ಬಿಡಬೇಡಿ, ಎಲ್ಲವನ್ನು ಅಟೆಂಪ್ಟ್ ಮಾಡಿ' ಎಂದು ಹೇಳಿಕೊಟ್ಟಿರುತ್ತೇವೆ. ಅದನ್ನು ಪಾಲಿಸುವ ಅನೇಕ ವಿದ್ಯಾರ್ಥಿಗಳು ಉತ್ತರ ಗೊತ್ತಿರಲಿ ಬಿಡಲಿ ಉತ್ತರಿಸಲು ಪ್ರಯತ್ನಿಸಿರುತ್ತಾರೆ. ಆದರೆ ಇದು ಮೌಲ್ಯಮಾಪನ ಕಾರ್ಯದಲ್ಲಿ ನಮ್ಮ ತಾಳ್ಮೆಗೆಡಿಸುತ್ತದೆ. ಆಗ 'ಎಲ್ಲ ಪ್ರಶ್ನೆ ಅಟೆಂಪ್ಟ್ ಮಾಡಲು ಇವರಿಗೆ ಯಾರು ಹೇಳಿದರೋ, ಅನಗತ್ಯವಾಗಿ ಬರೆದು ನಮ್ಮ ಪ್ರಾಣ ತಿನ್ನುತ್ತಿದ್ದಾರೆ' ಎಂದು ದೂರುತ್ತೇವೆ. ಅಲ್ಲಿಗೆ ಮೌಲ್ಯಮಾಪನ ಕಾರ್ಯ ಮುಗಿದಿರುತ್ತದೆ.

## ನನ್ನನ್ನು ಪಾಸ್ ಮಾಡಬೇಡಿ

ಕೆಲವು ವಿದ್ಯಾರ್ಥಿಗಳು ತಂದೆ ತಾಯಿಯರ ಮೇಲೆ ಸೇಡಿನ ಮನೋಭಾವ ಹೊಂದಿರುತ್ತಾರೆ. ಒಬ್ಬ ವಿದ್ಯಾರ್ಥಿಗೆ ತಾನು ವಿಜ್ಞಾನ ವಿಭಾಗದಲ್ಲಿ ಓದುವುದು ಇಷ್ಟವಿರಲಿಲ್ಲವಂತೆ. ತಂದೆ ತಾಯಿ ಒತ್ತಾಯಮಾಡಿ ಕಳಿಸಿದ್ದಾರೆ. ಆದ್ದರಿಂದ ಉತ್ತರ ಪತ್ರಿಕೆಯ ಮೊದಲ ಸಾಲಿನಲ್ಲಿ 'ನಾನೊಬ್ಬ ಬಿಲೋ ಆವರೇಜ್ ಸ್ಟೂಡೆಂಟ್. ನನಗೆ ಇಷ್ಟವಿಲ್ಲದ ವಿಜ್ಞಾನ ವಿಷಯಕ್ಕೆ ಸೇರಿಸಿ, ನನ್ನ ಜೀವನದ ಅಮೂಲ್ಯ ಸಮಯವನ್ನೇ ನನ್ನ ತಂದೆತಾಯಿಯರು ಬಲಿಕೊಟ್ಟಿದ್ದಾರೆ. ಅವರಿಗೆ ನಾನು ಡಾಕ್ಟರ್ ಆಗಬೇಕಂತೆ. ಕಠಿಣವಾದ ಪಿ.ಸಿ.ಎಂ.ಬಿ. ಸಂಯೋಜನೆಯ ವಿಷಯಗಳು ನನಗೆ ಕಿಂಚಿತ್ತೂ ಅರ್ಥವಾಗಿಲ್ಲ. ಫಸ್ಟ್ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜಿನ ಸ್ಟ್ರೆಂಥ್ ಉಳಿಸಿಕೊಳ್ಳಲು ನನ್ನನ್ನು ಪಾಸ್ ಮಾಡಿದ್ದರಂತೆ. ಆದ್ದರಿಂದ ಸೆಕೆಂಡ್ ಇಯರ್‌ಗೆ ಬಂದೆ. ಇನ್ನು ಮುಂದೆ ಸಾಧ್ಯವಿಲ್ಲ, ಇದು ಹೀಗೇ ಮುಂದುವರೆದರೆ ನಾನು ಡಾಕ್ಟರ್ ಆಗುವ ಬದಲು ಪರ್ಮನೆಂಟ್ ಪೇಶೆಂಟ್ ಆಗುತ್ತೇನೆ. ದಯವಿಟ್ಟು ನನ್ನನ್ನು ಪಾಸ್ ಮಾಡಬೇಡಿ' ಎಂದು ಗೋಗರೆದು ಕಾಣಿಕೆಯಾಗಿ 500 ರೂಪಾಯಿಯ ನೋಟನ್ನೂ ಅಂಟಿಸಿದ್ದ.